ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಮನೆ ಕಟ್ಟಿಕೊಂಡಿದ್ದಾರೆ. ಅವರು 10-20 ವರ್ಷಗಳಿಂದ ಅಲ್ಲಿ ವಾಸ ಮಾಡಿಕೊಂಡು ಬಂದಿದ್ದಾರೆ. ಅವರ ಮನೆಯ ಸಾಮಾನುಗಳೆಲ್ಲ ಇವತ್ತು ಬೀದಿಪಾಲಾಗಿದೆ. ಅವರು ಮಾನ್ಯ ಮುಖ್ಯ ಮಂತ್ರಿಗಳ ಮನೆ ಹತ್ತಿರ ಕೂಡ 2-3 ದಿವಸಗಳಿಂದ ಧರಣಿ ಮಾಡಿದರು. ಇದರ ಬಗ್ಗೆ ತಾವು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

MR. SPEAKER : Let us hear the Government.

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) : ಈಗಾಗಲೇ ಈ ವಿಚಾರ ನನ್ನ ಗಮನಕ್ಕೆ ಬಂದಿದೆ. ಸಂಬಂಧಪಟ್ಟ ಜಗನ್ನಾಥ್ ಅವರು ಮತ್ತು ಅಲ್ಲಿ ಇರತಕ್ಕಂತಹ ಪ್ರದೇಶದವರು ನನ್ನ ಗಮನಕ್ಕೆ ತಂದಿದ್ದಾರೆ. ಏಕೆಂದರೆ, ಇದು ನನ್ನ ಲೋಕಸಭಾ ಕ್ಷೇತ್ರ ಆಗಿತ್ತು. ಈ ಸಂದರ್ಭದಲ್ಲಿ ಈ ಸಮಸ್ಯೆಯನ್ನು ಬಗೆಹರಿಸಲು, ನಾನು ಇದರ ಬಗ್ಗೆ ಸರ್ಕಾರದ ವತಿಯಿಂದ ಏನೆಲ್ಲಾ ಕ್ರಮ ತೆಗೆದುಕೊಳ್ಳಬೇಕೊ ಅದನ್ನು ತೆಗೆದುಕೊಳ್ಳುತ್ತಾ ಇದ್ದೇನೆ. ಅದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳ ಕಡೆಯಿಂದ ಒಂದು ಹೇಳಿಕೆಯನ್ನು ಕೊಡಿಸಿದ್ದೇನೆ.

ಅಧ್ಯಕ್ಷರು : ಸರಿ. Once you made the point, no debate...

ಶ್ರೀ ಜಿ. ವಿ. ರಾಮರೆಡ್ಡಿ : ಇಲ್ಲಿ ನಾನು ಒಂದೇ ಒಂದು ಪಾಯಿಂಟ್ ಹೇಳುತ್ತೇನೆ. ನಷ್ಟ ಆಗಿರತಕ್ಕಂತಹ ಮನೆಗಳಿಗೆ ಪರಿಹಾರ ಕೊಡಬೇಕು, ಮತ್ತು ಯಾವ ಅಧಿಕಾರಿಗಳು ಇದರಲ್ಲಿ ಭಾಗಿ ಆಗಿದ್ದಾರೆ ಅವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು : ಆಯಿತು.

ಪೂರ್ಣ ಪ್ರಮಾಣದ ಸದಸ್ಯರ ಆಶ್ರಯ ಸಮಿತಿ ಮಾಡುವುದು

ಶ್ರೀ ಕೆ.ಎಸ್. ಈಶ್ವರಪ್ಪ : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ, ನಗರ ಪ್ರದೇಶಗಳಿಗೆ ಆಶ್ರಯ ಸಮಿತಿಯನ್ನು ಸರ್ಕಾರ ಏನೋ ನೇಮಕ ಮಾಡಿದೆ. ಪ್ರಾರಂಭದಲ್ಲಿ ಆಶ್ರಯ ಸಮಿತಿ ಶಾಸಕರ ಅಧ್ಯಕ್ಷರ ಸಮಿತಿಗೆ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು ಎಂದು ಅವಕಾಶ ಕೊಟ್ಟರು. ಅದು ಆದನಂತರ ಪುರ ಸಭೆ, ನಗರಸಭೆಗಳಿಗೆ ಅವಕಾಶ ಕೊಟ್ಟರಿ. ಗಲಾಟೆ ಆದ ತಕ್ಷಣ ಮತ್ತೆ ಆಶ್ರಯ ಸಮಿತಿಗೆ ಅವಕಾಶ ಕೊಟ್ಟರು. ಆದರೆ ಒಂದೇ ಒಂದು ಕಂಡೀಷನ್ ಹಾಕಿದ್ದಾರೆ. ನಾವು ಮೂರು ಜನ ಸದಸ್ಯರನ್ನು ನಾಮಕರಣ ಮಾಡುತ್ತೇವೆ ಎಂದು ಮಾಡಲಿ ನಾವು ಬೇಡ ಎನ್ನುವುದಿಲ್ಲ. ಆದರೆ ನಾಮಕರಣ ಸದಸ್ಯರು ಅಗುವತನಕ ಕೂಡ ಆಶ್ರಯ ಸಮಿತಿ ಏನೂ ಮಾಡಬಾರದು ಎಂದು ಕೊನೆಗೆ ಒಂದು ವಾಕ್ಯ ಸೇರಿಸಿದ್ದಾರೆ. ಇವರು ನಾಮಕರಣ ಮಾಡುವುದು ಯಾವಾಗ? ಇವತ್ತು ಯಾವುದೇ ಆಶ್ರಯ ಸಮಿತಿಗಳು ಕೆಲಸ ಇಲ್ಲದೆ ಸುಮ್ಮನೆ ಕುಳಿತುಕೊಂಡಿವೆ. ಅದಕ್ಕೋಸ್ಕರ ನಾಮಕರಣ ಮಾಡುವುದಾದರೆ ಬೇಗ ಮಾಡಿ. ಇಲ್ಲಾ ಎಂದರೆ ಇರುವ ಸಮಿತಿಗೆ ಪೂರ್ಣ ಅಧಿಕಾರ ಕೊಡಬೇಕೆಂದು ಹೇಳಿ ಎಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) : 175 ತಾಲ್ಲೂಕುಗಳ ಪೈಕಿ ಈಗಾಗಲೇ 80 ತಾಲ್ಲೂಕುಗಳಲ್ಲಿ ಆಶ್ರಯ ಸಮಿತಿ ಮಾಡಿದ್ದೇವೆ, ಪೂರ್ಣ ಸದಸ್ಯರ ಸಮಿತಿ ಮಾಡಿದ್ದೇವೆ. ನಗರ ಪ್ರದೇಶಗಳಲ್ಲಿ ಸುಮಾರು 50 ಸಮಿತಿಗಳನ್ನು ಮಾಡಿದ್ದೇವೆ. ಬಾಕಿ ಉಳಿದಿರುವಂತಹದ್ದನ್ನು ಶೀಘ್ರದಲ್ಲೇ ಕಾರ್ಯಗತ ಮಾಡುತ್ತೇವೆಂದು ಹೇಳುತ್ತೇನೆ.

ಅಧ್ಯಕ್ಷರು : ಬಹಳ ಒಳ್ಳೆಯದು

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ಮೂರು ಜನ ಸದಸ್ಯ ನಾಮಕರಣ ಮಾಡಿ ಬೇಡ ಎನ್ನುವುದಿಲ್ಲ. ಆದರೆ ನಾಮಕರಣ ಮಾಡುವ ತನಕ ಕೂಡ, ಈ ಆಶ್ರಯ ಸಮಿತಿಯವರು ಏನೂ ಮಾಡಕೂಡದು ಎಂದು ಒಂದು ಲೈನ್ ಸೇರಿಸಿದ್ದೀರಿ. ನೀವು ನಾಮಕರಣ ಮಾಡವುದಾದರೆ ಮಾಡಿ, ಇಲ್ಲಾ ಅಂದರೆ ವಿತ್ ಡ್ರಾ ಮಾಡಿ. ಇಲ್ಲವೇ ನಾಮಕರಣ ಸದಸ್ಯರನ್ನು ಮಾಡುವ ತನಕ ಈ ಸಮಿತಿಯ ಅಧಿಕಾರಕ್ಕೆ ಅವಕಾಶ ಕೊಟ್ಟಿದ್ದೇವೆ ಎಂದು ದಯವಿಟ್ಟು ಒಂದು ಮಾತನ್ನು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ 80 ತಾಲ್ಲೂಕುಗಳಲ್ಲಿ 3 ಜನ ಸದಸ್ಯರುಗಳ ಪೂರ್ಣ ಸಮಿತಿ ಮಾಡಿದ್ದೇವೆ. ಇನ್ನು ಬಾಕಿ ಉಳಿದಿರುವಂತಹದ್ದನ್ನು ಶೀಘ್ರದಲ್ಲಿಯೇ ಮಾಡುತ್ತೇವೆ.

ಕೊಡಗಿನ ಪೊನ್ನಂಪೇಟೆ ಗ್ರಾಮದ ಹೆಣ್ಣುಮಗಳ ಮೇಲೆ ಮೈಸೂರು ಸಬ್ ಇನಸ್ಪೆಕ್ಟರ್ ರಮೇಶ್ ಅವರಿಂದ ಅತ್ಯಾಚಾರ

+ಶ್ರೀ ಮಾರುತಿ ರಾವ್ ಇ. ಪವಾರ್ : ದಿನಾಂಕ 25.7.97 ರಂದು ಮೈಸೂರು ನಗರದಲ್ಲಿ ನಾವೆಲ್ಲಾ ತಲೆ ತಗ್ಗಿಸುವಂತಹ ಒಂದು ಘಟನೆ ನಡೆದಿದೆ. ನಮ್ಮ ಕೊಡಗಿನಿಂದ ಒಬ್ಬ ಹೆಣ್ಣು ಮಗಳು ಮೈಸೂರು ನಗರಕ್ಕೆ ಬಂದು ಕ್ರಿಸ್ಟರ್ ಕಲರ್ ಲ್ಯಾಬ್ ಎನ್ನುವ ಸಂಸ್ಥೆಯಲ್ಲಿ ಸೇಲ್ಸ್ ಗರ್ಲ್ ಆಗಿ ಕೆಲಸ ಮಾಡುವುದಕ್ಕೆ ಅವರು ಸಂದರ್ಶನಕ್ಕೆ ಬಂದು ಗುರು ಕೃಪ ಎನ್ನುವ ಒಂದು ಲಾಡ್ಜ್‌ನಲ್ಲಿ ಉಳಿದುಕೊಂಡರು. ಆ ಸಮಯದಲ್ಲಿ ಪೋಲಿಸರು ಆ ಲಾಡ್ಜ್‌ನ್ನು ರೈಡ್ ಮಾಡಿದರು. ಆದರೆ ಆ ಸಮಯದಲ್ಲಿ ಯಾವುದೇ ಒಂದು ಅಪರಾಧಕ್ಕೆ ಒಳಗಾಗದೆ ಇರುವಂತಹ ಆ ಹೆಣ್ಣು ಮಗಳನ್ನು ಮತ್ತು ಅವರ ಸಂಬಂಧಿಕರನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋದರು. ಅಲ್ಲಿ ಇರತಕ್ಕಂತಹ ಇನ್ಸ್‌ಪೆಕ್ಟರ್ ಹೊನಖಾಂಡೆ ಅವರು ಆ ಹೆಣ್ಣು ಮಗಳನ್ನು ವಿಚಾರಣೆ ಮಾಡಿ, ಆ ಹೆಣ್ಣು ಮಗಳಲ್ಲಿ ಯಾವುದೇ ರೀತಿಯ ಅಪರಾಧ ಇಲ್ಲಾ ಎಂದು ರುಜುವಾತು ಮಾಡಿದ ನಂತರ ಆ ಹೆಣ್ಣು ಮಗಳನ್ನು ಬಿಡುಗಡೆ ಮಾಡಬೇಕೆಂದು ಹೇಳಿ ಹೋಗಿದ್ದಾರೆ. ಅವರು ಹೋದಮೇಲೆ ಆ ಠಾಣೆಯ ಸಬ್ ಇನಸ್ಪೆಕ್ಟರ್ ರಮೇಶ್ ಎಂಬುವವರು ಆ ಹೆಣ್ಣುಮಗಳನ್ನು ಕೊಡಗಿನ ಪೊನ್ನಪೇಟೆಯ ಅವರ ಗ್ರಾಮಕ್ಕೆ ತಾನೇ ಬಿಟ್ಟುಬರುವುದಾಗಿ ಹೇಳಿ ಒಬ್ಬರು ಮಹಿಳಾ ಪೇದೆಯೊಂದಿಗೆ ಕಾರಿನಲ್ಲಿ ಕರೆದುಕೊಂಡುಹೋಗಿ ಆ ಹೆಣ್ಣುಮಗಳಮೇಲೆ ಅತ್ಯಾಚಾರ ಮಾಡಿ ಅನಂತರ ಆ ಹೆಣ್ಣುಮಗಳನ್ನು ಅವರ ಗ್ರಾಮಕ್ಕೂ ಬಿಡದೆ ಮತ್ತೆ ಮೈಸೂರಿಗೆ ಕರೆದುಕೊಂಡು ಬಂದು ಪೋಲೀಸ್ ಕ್ವಾಟ್ರಸ್‌ನಲ್ಲಿ ಮತ್ತೆ ಅವಳ ಮೇಲೆ ಅತ್ಯಾಚಾರ ಮಾಡಿ ಆ ಹೆಣ್ಣುಗಳನ್ನು ಗ್ರಾಮಾಂತರ ಬಸ್ ನಿಲ್ದಾಣದ ಹತ್ತಿರ ಕರೆದುಕೊಂಡು ಬಂದು ನೀನು ಈ ವಿಚಾರವನ್ನು ಯಾರ